# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1304 (1559)

ಸದಸ್ಯರ ಹೆಸರು : ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 17.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕದ ಯಾವ ಜಿಲ್ಲೆಗಳಲ್ಲಿ ಹುಣಸೆ ಕೃಷಿಯನ್ನು ಮಾಡಲಾಗುತ್ತಿದೆ; ವಾರ್ಷಿಕವಾಗಿ ರಾಜ್ಯದಲ್ಲಿ ಉತ್ಪಾದನೆಯಾಗುವ ಹುಣಸೆ ಹಣ್ಣಿನ ಪ್ರಮಾಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು); | ಕರ್ನಾಟಕದ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಕೊಪ್ಪಳ, ಮಂಡ್ಯ, ಚಾಮರಾಜನಗರ, ಬಾಗಲಕೋಟೆ, ಬೆಳಗಾವಿ, ಗದಗ, ಚಿಕ್ಕಮಗಳೂರು, ಹಾಸನ, ಮೈಸೂರು ಜಿಲ್ಲೆಗಳಲ್ಲಿ ಹುಣಸೆ ಕೃಷಿಯನ್ನು ಮಾಡಲಾಗುತ್ತಿದೆ. ವಾರ್ಷಿಕವಾಗಿ ರಾಜ್ಯದಲ್ಲಿ ಹುಣಸೆ ಹಣ್ಣಿನ ಉತ್ಪಾದನೆಯ ಪ್ರಮಾಣ 20,651 ಮೆಟ್ರಿಕ್ ಟನ್ ಗಳಾಗಿರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಹುಣಸೆ ಕೃಷಿ ಮಾಡುವ ವಿಧಾನ ಏನು; (ವಿವರವಾಗಿ ತಿಳಿಸುವುದು); | ಹುಣಸೆ ಕೃಷಿ ಮಾಡುವ ವಿಧಾನವು ಕೆಳಕಂಡಂತಿರುತ್ತದೆ:-<br><br>1) **ಮಣ್ಣು ಮತ್ತು ಹವಾಗುಣ**: ಹುಣಸೆಯು ಉಷ್ಣವಲಯದ ಬೆಳೆಯಾಗಿದ್ದು, ಕಡಿಮೆ ತೇವಾಂಶದಲ್ಲಿ ಬೆಳೆಯಬಹುದಾಗಿರುತ್ತದೆ. ಎಲ್ಲಾ ರೀತಿಯ ಮಣ್ಣಿನಲ್ಲಿ ಬೆಳೆಯಬಹುದಾಗಿದ್ದು, ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ಹಾಗೂ ಬಂಜರು ಭೂಮಿಯಲ್ಲಿ ಸಾಮಾನ್ಯವಾಗಿ ಇದನ್ನು ಬೆಳೆಯಲಾಗುತ್ತಿದೆ. ಫಲವತ್ತಾದ ಭೂಮಿಯಲ್ಲಿ ಬೆಳೆಯು ಚೆನ್ನಾಗಿ ಬರುತ್ತದೆ.<br><br>2) **ನಾಟಿ ಮಾಡುವ ಕಾಲ :**<br>ಜೂನ್ ಮತ್ತು ಜುಲೈ ತಿಂಗಳುಗಳು ನಾಟಿ ಮಾಡಲು ಸೂಕ್ತವಾಗಿರುತ್ತದೆ.<br><br>3) **ತಳಿಗಳು**: DTS-1, DTS-2, GKVK-17, ATS-1<br><br>4) **ನಾಟಿ ಮಾಡುವ ವಿಧಾನ :**<br>ಸಾಂಪ್ರದಾಯಿಕ ವಿಧಾನದಲ್ಲಿ ಗಿಡದಿಂದ ಗಿಡಕ್ಕೆ ಮತ್ತು ಸಾಲಿನಿಂದ ಸಾಲಿಗೆ 10ಮೀx10ಮೀ ಅಂತರದಲ್ಲಿ (100 ಗಿಡಗಳು) ಅಥವಾ ಅತೀ ಸಾಂದ್ರತೆ ವಿಧಾನದಲ್ಲಿ 6ಮೀx6ಮೀ ಅಂತರದಲ್ಲಿ (277 ಗಿಡಗಳು) ಸುಮಾರು 90ಸೆಂ.ಮೀx90ಸೆಂ.ಮೀx90 ಸೆಂ.ಮೀ ಆಳತೆಯ ಗುಂಡಿಗಳನ್ನು ತೆಗೆದು 50 ಗ್ರಾಂ VAM ಜೈವಿಕ ಗೊಬ್ಬರವನ್ನು 5 ಕೆ.ಜಿ. ಕೊಟ್ಟಿಗೆ ಗೊಬ್ಬರದ ಜೊತೆಯಲ್ಲಿ ಮಿಶ್ರಣ ಮಾಡಿ ಹಾಕಿ ಗಿಡಗಳನ್ನು ನಾಟಿ ಮಾಡಬೇಕಾಗಿರುತ್ತದೆ. |

| | | |
|---|---|---|
| | | 5) **<u>ಅಂತರ ಬೆಳೆ :</u>**<br>ನಾಟಿ ಮಾಡಿದ ನಂತರ 6 ರಿಂದ 8 ವರ್ಷಗಳವರೆಗೆ ಮಧ್ಯಂತರ ಬೇಸಾಯ ಮಾಡಬಹುದು. ದ್ವಿದಳ ಧಾನ್ಯಗಳು, ಅರಿಶಿನ, ಶುಂಠಿ, ತರಕಾರಿ ಹಾಗೂ ಇನ್ನಿತರೆ ಬೆಳೆಗಳನ್ನು ಬೆಳೆಯಬಹುದಾಗಿರುತ್ತದೆ.<br><br>6) **<u>ಸಸ್ಯ ಸಂರಕ್ಷಣೆ :</u>**<br>1) **ಕಾಯಿ ಕೊರೆಯುವ ಕೀಟ** : ಸದರಿ ಕೀಟದ ಬಾಧೆಯ ನಿರ್ವಹಣೆಗಾಗಿ ಅಜಾದಿರಕ್ತಿನ್ ಕೀಟನಾಶಕವನ್ನು1500 ಪಿ.ಪಿ.ಎಮ್ 3ಮಿ.ಲಿ ಪ್ರತಿ ಲೀಟರ್ ನೀರಿಗೆ ಬೆರೆಸಿದ ದ್ರಾವಣದಿಂದ ಕಾಯಿ ಮಾಗುವ ಸಮಯದಲ್ಲಿ ಸಿಂಪಡಿಸಬೇಕಾಗಿರುತ್ತದೆ.<br>2) **ಬೂದಿ ರೋಗ** : ಹೊಸ ಚಿಗುರು ಬಂದ ತಕ್ಷಣ 1 ಗ್ರಾಂ ಕಾರ್ಬನ್ ಡೈಜಿಮ್ 50 w.p. ಅಥವಾ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕವನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕಾಗಿರುತ್ತದೆ. |
| ಇ) | ಹುಣಸೆ ಕೊಯ್ಲು ಮತ್ತು ಸಂಸ್ಕರಣೆ ಸಮಯದಲ್ಲಿ ರೈತರು ಕಾರ್ಮಿಕರ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದರ ಯಾಂತ್ರೀಕರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; | ಗಮನಕ್ಕೆ ಬಂದಿರುತ್ತದೆ.<br><br>ಹುಣಸೆ ಬೆಳೆ ಯಾಂತ್ರೀಕರಣಕ್ಕೆ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯಡಿ ಪವರ್ ವೀಡರ್ ಖರೀದಿಗೆ ಸಾಮಾನ್ಯ ವರ್ಗದ ರೈತರಿಗೆ ಘಟಕ ವೆಚ್ಚದ 40% ರಂತೆ ರೂ.7,308 ರಿಂದ ರೂ.1,05,000 ರವರೆಗೆ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಘಟಕ ವೆಚ್ಚದ 50% ರಂತೆ ರೂ.9,135 ರಿಂದ ರೂ.1,31,250 ರವರೆಗೆ ಸಹಾಯಧನ ನೀಡಲಾಗುವುದು. |
| ಈ) | ಹುಣಸೆ ಕೊಯ್ಲು ಮಾಡುವ ಸಮಯದಲ್ಲಿ ರೈತರು ಅಥವಾ ಕೂಲಿ ಕಾರ್ಮಿಕರು ಮೃತಪಟ್ಟರೆ ಅಥವಾ ಗಾಯಗೊಂಡರೆ ಸರ್ಕಾರ ನೀಡುವ ಪರಿಹಾರದ ಮೊತ್ತವೆಷ್ಟು; ಸದರಿ ಪರಿಹಾರ ಮೊತ್ತ ಬಹಳ ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಸದರಿ ಮೊತ್ತವನ್ನು ಹೆಚ್ಚಿಸಲು ಕೈಗೊಂಡ ಕ್ರಮವೇನು; | ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವ ಸಮಯದಲ್ಲಿ ಹಾವು ಕಡಿತದಿಂದ/ ಆಕಸ್ಮಿಕ ಮರಣ ಹೊಂದಿದ ರೈತರ ಹಾಗೂ ಕೃಷಿ ಕಾರ್ಮಿಕರ ಕುಟುಂಬಗಳಿಗೆ ಕೃಷಿ ಇಲಾಖೆಯಿಂದ ಈ ಹಿಂದೆ 2016-17ರವರೆಗೆ ರೂ.1.00 ಲಕ್ಷ ಪರಿಹಾರ ಧನ ವಿತರಿಸಲಾಗುತ್ತಿತ್ತು ಪ್ರಸ್ತುತ ಈ ಮೊತ್ತವನ್ನು ರೂ.2.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. |
| ಉ) | ಹುಣಸೆ ಕೃಷಿಯು ಬಹಳ ಕಷ್ಟಕರವಾದ ಕಾರಣ ರೈತರು ಹುಣಸೆ ಕೃಷಿಯಿಂದ ವಿಮುಖರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹುಣಸೆ ಕೃಷಿಯನ್ನು | ಗಮನಕ್ಕೆ ಬಂದಿರುತ್ತದೆ.<br><br>ಇಲಾಖೆಯ ವತಿಯಿಂದ ಹುಣಸೆ ಕೃಷಿಯನ್ನು ಪ್ರೋತ್ಸಾಹಿಸಲು ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:- |

| | | |
|---|---|---|
| | ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | 1. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಹುಣಸೆ ಬೆಳೆಯ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಪ್ರತಿ ಹೆಕ್ಟೇರಿಗೆ ತಗಲುವ ಘಟಕ ವೆಚ್ಚ ರೂ.75,000/- ಗಳಿಗೆ ಶೇ.40 ರಂತೆ ರೂ.30,000/- ಸಹಾಯಧನವನ್ನು ಎರಡು ಹಂತಗಳಲ್ಲಿ ಮೊದಲನೇ ವರ್ಷ ರೂ.18,000/- ಹಾಗೂ ಎರಡನೇ ವರ್ಷ ರೂ.12,000/- ಗಳನ್ನು ಗರಿಷ್ಠ 2 ಹೆಕ್ಟೇರ್ ವರೆಗೆ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಈವರೆಗೆ 22 ಹೆಕ್ಟೇರ್ ಪ್ರದೇಶದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದ್ದು, ರೂ.6.60 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.<br><br>2. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಹುಣಸೆ ಬೆಳೆಯ ಪ್ರದೇಶ ವಿಸ್ತರಣೆಗೆ ಪ್ರತಿ ಹೆಕ್ಟೇರ್ ಗೆ ರೂ.1,20,079/- ಗಳ ಸಹಾಯಧನವನ್ನು ನೀಡಲಾಗುತ್ತಿದೆ. ಸದರಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಈವರೆಗೆ 15 ಹೆಕ್ಟೇರ್ ಪ್ರದೇಶಕ್ಕೆ ರೂ.12.50 ಲಕ್ಷ ಭರಿಸಲಾಗಿದೆ.<br><br>3. ಹನಿ ನೀರಾವರಿ ಯೋಜನೆಯಡಿ 2 ಹೆಕ್ಟೇರ್ ಪ್ರದೇಶದವರೆಗೆ ಘಟಕ ವೆಚ್ಚದ ಶೇ. 90 ರಂತೆ ಹಾಗೂ 2 ಹೆಕ್ಟೇರ್ ನಂತರದಿಂದ 5 ಹೆಕ್ಟೇರ್‌ವರೆಗೆ ಘಟಕ ವೆಚ್ಚದ ಶೇ.45% ರಂತೆ ಸಹಾಯಧನವನ್ನು ನೀಡಲಾಗುವುದು. |

ಸಂಖ್ಯೆ: HORTI 123 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಅನುಬಂಧ - L LCQ 1304/1550

| ಹುಣಸೆ ಬೆಳೆಯ ವಿಸ್ತೀರ್ಣ ಮತ್ತು ಉತ್ಪಾದನೆ ವಿವರ | | |
|---|---|---|
| ಜಿಲ್ಲೆಗಳು | (ಹೆಕ್ಟೇರ್ ಗಳಲ್ಲಿ) | (ಮೆಟ್ರಿಕ್ ಟನ್ ಗಳಲ್ಲಿ) |
| ಬೆಂಗಳೂರು ನಗರ | 22 | 4 |
| ಬೆಂಗಳೂರು ಗ್ರಾಮಾಂತರ | 320 | 51 |
| ಚಿಕ್ಕಬಳ್ಳಾಪುರ | 426 | 1668 |
| ಚಿತ್ರದುರ್ಗ | 260 | 51 |
| ದಾವಣಗೆರೆ | 29 | 135 |
| ಕೋಲಾರ | 364 | 1535 |
| ರಾಮನಗರ | 30 | 83 |
| ಶಿವಮೊಗ್ಗ | 9 | 17 |
| ತುಮಕೂರು | 3395 | 7939 |
| ಬಾಗಲಕೋಟೆ | 10 | 44 |
| ಬೆಳಗಾವಿ | 23 | 4 |
| ವಿಜಯಪುರ | 8 | 25 |
| ಧಾರವಾಡ | 1 | 0 |
| ಗದಗ | 33 | 6 |
| ಹಾವೇರಿ | 15 | 92 |
| ಉತ್ತರ ಕನ್ನಡ | 1 | 7 |
| ಬಳ್ಳಾರಿ | 17 | 3 |
| ಬೀದರ್ | 8 | 2 |
| ಕಲಬುರ್ಗಿ | 18 | 3 |
| ಕೊಪ್ಪಳ | 43 | 8 |
| ರಾಯಚೂರು | 13 | 2 |
| ಯಾದಗಿರಿ | | |
| ಚಾಮರಾಜನಗರ | 35 | 5 |
| ಚಿಕ್ಕಮಗಳೂರು | 32 | 89 |
| ದಕ್ಷಿಣ ಕನ್ನಡ | 1 | 3 |
| ಹಾಸನ | 10 | 2 |
| ಕೊಡಗು | | |
| ಮಂಡ್ಯ | 7 | 1 |
| ಮೈಸೂರು | 5 | 1 |
| ಉಡುಪಿ | 1 | 4 |
| ವಿಜಯನಗರ | 57 | 285 |
| ಒಟ್ಟು | 5193 | 12068 |